ಲೈಸನ್ಸ್‌ಗಳ ಹೆಚ್ಚಳಿಕೆ ಬಗ್ಗೆ ಹೆಚ್ಚು ಹೆಚ್ಚು ದೂರಿನ ಮನವಿಗಳ ಬರುವಿಕೆಯಿಂದಾಗಿ, ಸಿಎಲ್-2 ಲೈಸನ್ಸ್ ಮಂಜೂರು ಮಾಡುವುದನ್ನು ಸಧ್ಯಕ್ಕೆ ತಡೆಹಿಡಿಯಲಾಗಿದೆ, 1991ರ ಜನಗಣತಿ ಆಧಾರದ ಮೇಲೆ ಸಿಎಲ್-2ಲೈಸನ್ಸ್ ಕೋಟಾವನ್ನು ಪರಿಷ್ಕರಿಸಲಾಗುವುದು ಎಂದು ತಿಳಿಸಿದ್ದಾರೆ. ನೀವು ವಿಶೇಷ ಆದ್ಯತೆಯ ಮೇರೆಗೆ ಎಂದು ಕೊಟ್ಟಾಗ ಹೀಗೆ ಕೊಟ್ಟಿದ್ದು ಏಕೆ ಮತ್ತು ಕೊಟ್ಟಿದ್ದನ್ನು ತಡೆಹಿಡಿದದ್ದು ಏಕೆ ? 152ರಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಬರುತ್ತದೆ ಎಂದು ತಿಳಿಸುತ್ತೀರಾ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ತುಮಕೂರು ಜಿಲ್ಲೆಯಲ್ಲಿ ಎಷ್ಟು ಎಂದು ಕೇಳಿದ್ದಾರೆ ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಈ ಲೈಸನ್ಸ್‌ನ್ನು ಕೊಡಬೇಕಾದರೆ ಕೆಲವು ನಿಯಮಗಳು ಇವೆ. ಪಟ್ಟಣಗಳಲ್ಲಿ ಏಳೂವರೆ ಸಾವಿರ ಜನಸಂಖ್ಯೆಗೆ ಒಂದು ಲೈಸನ್ಸ್ ಕೊಡಬೇಕೆಂದು ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ 15 ಸಾವಿರ ಜನಸಂಖ್ಯೆಗೆ ಒಂದು ಕೊಡಬೇಕೆಂದು ಇದೆ. ಈಗಾಗಲೇ ಕೊಟ್ಟಿದ್ದರಲ್ಲಿ ಈ ಒಂದು ಪ್ರಮಾಣಕ್ಕೆ ಮೀರಿ, ಕೊಟ್ಟಿರುವುದರಿಂದ ಸರ್ಕಾರ ಅದನ್ನು ತಡೆಹಿಡಿದಿದೆ. ಸರ್ಕಾರದ ಈಗೀನ ಧೋರಣೆಯ ಪ್ರಕಾರ ಹೆಚ್ಚು ಲೈಸನ್ಸ್‌ಗಳನ್ನು ಕೊಡಬಾರದು ಎಂದು ಇದೆ. ಹಾಗಾಗಿ ಮುಂದಿನ ಲೈಸನ್ಸ್ ಕೊಡುವುದನ್ನು ನಿಲ್ಲಿಸಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ:– ಮಾನ್ಯ ಸಭಾಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಸನ್ಮಾನ್ಯ ಸಚಿವರು ಅರ್ಥಮಾಡಿಕೊಂಡಿಲ್ಲ. ನೀವು ಲೈಸೆನ್ಸ್ ಕೊಡುವುದಕ್ಕಿಂತ ಮುಂಚೆ ಇರುವ ಎಲ್ಲಾ ನಿಯಮಗಳನ್ನು ಪರಿಶೀಲಿಸಿ ಕೊಡಬೇಕಾಗುತ್ತದೆ. ಹೀಗೆ ಕೊಟ್ಟಾದ ಮೇಲೆ ತಡೆಹಿಡಿಯತಕ್ಕಂಥಾದ್ದು ಏನಿದೆ ? ನೀವು ಪರವಾನಿಗೆಗಳನ್ನು ಹೆಚ್ಚು ಕೊಡಿ ಎಂಬ ಬಗ್ಗೆ ನಾನು ಒತ್ತಾಯ ಮಾಡುವುದಿಲ್ಲ. ನಾನು ಈಗ ಕೇಳುತ್ತಿರುವ ಪ್ರಶ್ನೆಯನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಕುಡಿಯುವವರ ಕಷ್ಟ ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ. 1991ರ ಜನಗಣತಿಯ ಆಧಾರದ ಮೇಲೆ ಕೋಟಾವನ್ನು ಫಿಕ್ಸ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಆ ಪ್ರಕಾರ ಕೋಟ ಫಿಕ್ಸ್ ಮಾಡುವಾಗ ಅವರಿಗೆ ಆದ್ಯತೆಯ ಮೇಲೆ ಕೊಡುತ್ತೀರಾ ? ಇವೊತ್ತು ಒಂದು ಲೈಸನ್ಸ್ ಪಡೆಯಲು ಪರವಾನಿಗೆದಾರರಿಗೆ ಎರಡು ಲಕ್ಷ ರೂಪಾಯಿಗಳ ಖರ್ಚು ಆಗುತ್ತದೆ. ಬೇರೆ ಜಿಲ್ಲೆಯ ವಿಚಾರ ನನಗೆ ಗೊತ್ತಿಲ್ಲ, ಆದರೆ ತುಮಕೂರು ಜಿಲ್ಲೆಯಲ್ಲಿ ಒಬ್ಬರು ಎಕ್ಸೈಸ್ ಸೂಪರಿಂಟೆಂಡೆಂಟ್ ಇದ್ದಾರೆ, ಅವರಿಗೆ ಬರೀ 50ಸಾವಿರ ರೂಪಾಯಿಗಳ ಲಂಚವನ್ನೇ ಕೊಡಬೇಕಾಗುತ್ತದೆ. ಹೀಗಿರುವಾಗ ಬೇರೆ ಖರ್ಚುವೆಚ್ಚಗಳು ಒಂದೂವರೆ ಲಕ್ಷ ರೂಪಾಯಿಗಳು ಬರುತ್ತವೆ. ಈಗ ನೀವು ಲೈಸೆನ್ಸ್ ಕೊಡದಿದ್ದರೆ ಅವರು ಕೊಟ್ಟ ಹಣವೂ ಹೋಯಿತು ಕೊಟ್ಟ ಹಣ ವಾಪಸ್ ಬರುವ ಹಾಗಿಲ್ಲ, ನೀವು ಲೈಸೆನ್ಸ್ ಕೊಡುವ ಹಾಗಿಲ್ಲ, ಜನರಿಗೆ ತೊಂದರೆಯಾಗುತ್ತದೆ. ಸರ್ಕಾರದ ದ್ವಂದ್ವ ನೀತಿಗಳು ಏನೇ ಇರಲಿ, ಅದರಿಂದ ಜನರಿಗೆ ತೊಂದರೆಯಾಗಬಾರದು. 1991ರ ಜನಸಂಖ್ಯೆಯ ಆಧಾರದ ಮೇಲೆ ಕೋಟಾ ಫಿಕ್ಸ್ ಮಾಡುವಾಗ ಆದ್ಯತೆಯ ಮೇಲೆ ಕೊಡುತ್ತೀರ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಪರವಾನಿಗೆಯನ್ನು ಕೊಟ್ಟು ನಾವು ಯಾರಿಂದಲೂ ವಾಪಸ್ ತೆಗೆದುಕೊಂಡಿಲ್ಲ. ಪರವಾನಿಗೆಗಾಗಿ ಅರ್ಜಿ ಯಾರು ಕೊಟ್ಟಿದ್ದಾರೆ ಅವರಿಗೆ ಕೊಟ್ಟಿಲ್ಲ ಅಷ್ಟೆ. ತಡೆಹಿಡಿಯಲಾಗಿದೆ ಅಂದರೆ ಮುಂದೆ ಪರವಾನಿಗೆಯನ್ನು ಕೊಡುವುದಿಲ್ಲ ಎಂದು ಅರ್ಥ. ಪರಪಾನಗಿ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದರೆ, ಆಗ ತಮ್ಮ ಕೋರಿಕೆಯ ಪ್ರಕಾರ ಆದ್ಯತೆಯ ಮೇಲೆ ಕೊಡುತ್ತೇವೆ.

ಗೃಹ ಇಲಾಖೆಯ ಶೀಘ್ರಲಿಪಿಗಾರರಿಗೆ ಬಡ್ತಿ

194 (692): ಶ್ರೀಮತಿ ಸುಮಾ ವಸಂತ (ವೀರಾಜಪೇಟೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗೃಹ ಇಲಾಖೆಯಲ್ಲಿರುವ ಶೀಘ್ರಲಿಪಿಗಾರರೆಷ್ಟು ?

ಆ. ಎಷ್ಟು ಜನ ಶೀಘ್ರಲಿಪಿಗಾರರು, ಶಾಖಾಧೀಕ್ಷಕರಾಗಿ ಬಡ್ತಿ ಹೊಂದಲು ಅರ್ಹರಾಗಿರುತ್ತಾರೆ ?

ಇ. ಶಾಖಾಧೀಕ್ಷಕರ ಎಷ್ಟು ಹುದ್ದೆಗಳು ಖಾಲಿ ಇವೆ ?

ಈ. ಶಾಖಾಧೀಕ್ಷಕರ ಹುದ್ದೆಯನ್ನು ಯಾವ ನಿಯಮದ ಪ್ರಕಾರ ಭರ್ತಿ ಮಾಡಲಾಗುವುದು ಮತ್ತು ಯಾವಾಗ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಒಟ್ಟು 148 ಮಂದಿ ಶೀಘ್ರಲಿಪಿಗಾರರಿರುತ್ತಾರೆ.

ಆ. ಯಾರೂ ಇರುವುದಿಲ್ಲ.

ಇ. ಒಟ್ಟು 6 ಹುದ್ದೆಗಳು ಖಾಲಿ ಇವೆ.

ಈ. ಗೃಹ ರಕ್ಷಕ ದಳ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಅನ್ವಯ ಅಧೀಕ್ಷಕ ಹುದ್ದೆಯನ್ನು ಪ್ರಥಮ ದರ್ಜೆ ಸಹಾಯಕ ಹಾಗೂ ಶೀಘ್ರಲಿಪಿಗಾರರ ವೃಂದದಿಂದ ಬಡ್ತಿಯ ಮೂಲಕ ಭರ್ತಿ ಮಾಡಲಾಗುತ್ತಿದೆ. ಉಳಿದಂತೆ ಪೋಲೀಸ್, ಕಾರಾಗೃಹ ಮತ್ತು ಅಗ್ನಿಶಾಮಕ ದಳ ಇಲಾಖೆಗಳಲ್ಲಿ ಈ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಪ್ರಥಮ ದರ್ಜೆ ಸಹಾಯಕರಿಗೆ ಬಡ್ತಿ ಕೊಡುವ ಮೂಲಕ ಶಾಖಾಧೀಕ್ಷಕರ ಹುದ್ದೆಯನ್ನು ತುಂಬಲಾಗುತ್ತಿದೆ. ಪೋಲೀಸ್, ಅಗ್ನಿಶಾಮಕ ದಳ ಮತ್ತು ಕಾರಾಗೃಹ ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶಾಖಾಧೀಕ್ಷಕರ ಹುದ್ದೆಗಳನ್ನು ಶೀಘ್ರಲಿಪಿಗಾರರ ವೃಂದದಿಂದಲೂ ಮುಂಬಡ್ತಿ ಮುಖಾಂತರ ತುಂಬಲು ಅವಕಾಶ ಕಲ್ಪಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಸುಮಾ ವಸಂತ್:– ಮಾನ್ಯ ಅಧ್ಯಕ್ಷರೇ, ಈ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕರ ಹಾಗೂ ಶೀಘ್ರಲಿಪಿಗಾರರ ವೃಂದದಿಂದ ಭರ್ತಿ ಮೂಲಕ ಭರ್ತಿ ಮಾಡಲಾಗುವುಗು ಎಂದು ಹೇಳಿದ್ದಾರೆ. ಹಾಗಾದರೆ ಹಿಂದೆ ಇದ್ದ ಪ್ರಮಾಣ ಮತ್ತು ಈಗ ಇರುವ ಪ್ರಮಾಣವನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅಧ್ಯಕ್ಷರೇ, ಹೊಸದಾಗಿ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ ಸದ್ಯಕ್ಕೆ ಹೊಸ ನೇಮಕಾತಿಗಳನ್ನು ಮಾಡುವುದಕ್ಕೆ ತಡೆಯಾಜ್ಞೆ ಇದೆ. ಈ ತಡೆಯನ್ನು ತೆರವು ಮಾಡುವವರೆಗೆ ನೇಮಕಾತಿಗಳು ಆಗುವುದಿಲ್ಲ.

ಶ್ರೀಮತಿ ಸುಮಾ ವಸಂತ್:– ಪ್ರಥಮ ದರ್ಜೆ ಸಹಾಯಕರ ಬಗ್ಗೆ ಸರಕಾರದವರು ಒಂದು ಆಶ್ವಾಸನೆ ಕೊಟ್ಟಿದ್ದರು. ಅದನ್ನು ಈಡೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಬೈ ಪ್ರೊಮೋಷನ್ ಮುಖಾಂತರ ಮುಂಬಡ್ತಿ ಕೊಡುವಂತಹ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಸಾರಿಗೆ ಮಂತ್ರಿಗಳು ಸದನಕ್ಕೆ ಬಂದಿಲ್ಲ. ಮುಖ್ಯಮಂತ್ರಿಗಳಿಗೆ ಆರೋಗ್ಯ ಚೆನ್ನಾಗಿಲ್ಲ, ಅದುದರಿಂದ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಇದೇನು ಸರ್ವರೋಗಕ್ಕೆ ಸಂಜೀವಿನಿ ಮದ್ದು ಅನ್ನುವ ರೀತಿ ಎಲ್ಲಾ ಇಲಾಖೆಗಳಿಗೂ

ಇವರೆ ಉತ್ತರ ಕೊಡುತ್ತಿದ್ದಾರೆ. ಪ್ರಶ್ನೋತ್ತರ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇರಬೇಕು ಎಂದು ಹೇಳಿ. ಆ ರೀತಿ ಏನಾದರೂ ಸಾರಿಗೆ ಮಂತ್ರಿಗಳು ಹೇಳಿದ್ದರೆ ನಮಗೆ ತಿಳಿಸಬೇಕು.

ಸಭಾಧ್ಯಕ್ಷರು:– ನಮಗೆ ತಿಳಿಸಿದ್ದಾರೆ, ಅವರು ದೆಹಲಿಗೆ ಹೋಗಿದ್ದಾರೆ.

ರಾಜ್ಯದಲ್ಲಿರುವ ನಿರುದ್ಯೋಗಿಗಳಿಗೆ ಆಟೋರಿಕ್ಷಾ ರಹದಾರಿ

195 (943): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಜನವರಿ 1992ರಿಂದ ಡಿಸೆಂಬರ್ 1992ರ ಅಂತ್ಯದವರೆಗೆ ಎಷ್ಟು ವ್ಯಕ್ತಿಗಳಿಗೆ ಆಟೋರಿಕ್ಷಾ ರಹದಾರಿ ನೀಡಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು) ?

ಆ. ಅವರಲ್ಲಿ ಪರಿಶಿಷ್ಟ ಜಾತಿ; ಪರಿಶಿಷ್ಟ ಪಂಗಡದವರು ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು) ?

ಇ. ಸರ್ಕಾರವು ಆಟೋಗಳಿಗೆ ರಹದಾರಿಗಳನ್ನು ಕೊಡುವುದನ್ನು ನಿಲ್ಲಿಸಿದೆಯೇ ?

ಈ. ಹಾಗಾದರೆ ಯಾವಾಗ ನಿಲ್ಲಿಸಿದೆ ಮತ್ತು ಕಾರಣಗಳೇನು ?

ಉ. ಈ ರಹದಾರಿಗಳನ್ನು ನೀಡಲು ಮಾರ್ಗ ಸೂಚಿ ಏನಾದರೂ ನೀಡಿದೆಯೇ ?

ಊ. ನಿರುದ್ಯೋಗಿ ಪರಿಶಿಷ್ಟ ಜಾತಿ; ಪರಿಶೀಷ್ಟ ಪಂಗಡದವರಿಗೆ ರಹದಾರಿ ನೀಡುವುದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. 10,144 ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ–Iರಲ್ಲಿ ಕೊಡಲಾಗಿದೆ.

ಆ. 469 ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ–Iರಲ್ಲಿ ಕೊಡಲಾಗಿದೆ.

ಇ. – ಇಲ್ಲಾ –

ಈ. ಪ್ರಶ್ನೆ ಉದ್ಭವಿಸುವುದಿಲ್ಲ.

ಉ. – ಇಲ್ಲಾ –

ಊ. ರಾಜ್ಯದಲ್ಲಿ ಆಟೋರಿಕ್ಷಾ ರಹದಾರಿಗಳನ್ನು ಮಂಜೂರು ಮಾಡುವಲ್ಲಿ ಯಾವುದೇ ತಾರತಮ್ಯ ಇರುವುದಿಲ್ಲ. ಆದರೂ ಸಹ ಪರಿಶಿಷ್ಟ ಜಾತಿ; ಪರಿಶಿಷ್ಟ ಪಂಗಡದ ಅರ್ಜಿದಾರರಿಗೆ ಆದ್ಯತೆ ನೀಡಲಾಗುವುದು.